ತನ್ನ ಪ್ರತಿಯೊಂದು ಮಾತಿಗೂ ಸಾರ್ತ್ರ್‌ರಿಂದ ಒತ್ತಾಯಪೂರ್ವಕವಾದ ಸಮ್ಮತಿ ಬಯಸುತ್ತಿದ್ದ. ಇದು ಅವರಿಗೆ ಇಷ್ಟವಿರಲಿಲ್ಲ. ಜಾಗತಿಕ ಮಾನವ ಸಂಬಂಧಗಳ ಬಲಿಷ್ಠ ರಚನೆಗಾಗಿ ಹಂಬಲಿಸುತ್ತಿದ್ದ ಸಾರ್ತ್ರ್‌ಗೆ ಇದು ಆಘಾತಕಾರಿ ಸಂಗತಿಯಾಗಿತ್ತು. ವಿಕ್ಟರ್ ಬಗ್ಗೆ ಹೇಸಿಗೆ ಎನಿಸಿತು. ಆತ ವೃದ್ಧ ಸಾರ್ತ್ರ್‌ರನ್ನು ಅಪಹರಿಸಿದಂತಿತ್ತು.

ಅನೇಕ ಬಾರಿ ಸಾರ್ತ್ರ್ ತಮ್ಮ ವಿಚಾರಗಳ ವಿರುದ್ಧ ದಿಕ್ಕಿನಲ್ಲೂ ಯೋಚಿಸುತ್ತಿದ್ದರು. ಕಾರಣವಿಷ್ಟೆ: ಸತ್ಯದ ಎಲ್ಲ ಮುಖಗಳು ನಿಖರವಾಗಿ ಗೋಚರವಾಗಲಿ ಎಂಬುದು. ವಿರುದ್ಧ ದಿಕ್ಕುಗಳಲ್ಲಿ ಯೋಚಿಸಿ ನಿರ್ಣಯಕ್ಕೆ ಬರುವುದು ಸಾರ್ತ್ರ್‌ರ ಚಿಂತನಾಕ್ರಮವಾಗಿತ್ತು. ವರ್ತಮಾನಕ್ಕೆ ಜೋತುಕೊಂಡು ಬಿದ್ದವರಂತೆ ತೋರುತ್ತಿದ್ದರೂ ಭವಿಷ್ಯದ ಬಗ್ಗೆ ಸದಾ ಎಚ್ಚರದಿಂದಿದ್ದರು. ಅವರನ್ನು ವರ್ತಮಾನಕ್ಕೆ ಕಟ್ಟುಬಿದ್ದ ಚಿಂತಕನಂತೆ ಕಾಣಲಾಗುತ್ತಿತ್ತು. ಇದೆಲ್ಲ ಅವರಿಗೆ ಬೇಸರ ತರಿಸಿತ್ತು. ಭವಿಷ್ಯಕ್ಕೆ ಮುಖ ತಿರುಗಿಸಿದ ಕುರುಡು ಚಿಂತನೆ ಅವರಿಗೆ ಇಷ್ಟವಿರಲಿಲ್ಲ. ತನ್ನ ಅಸ್ತಿತ್ವವಾದ ಹೊಸ ರೂಪ ಪಡೆದು



ಸಿಮೊನ್ ದ ಬೊವಾ ಮತ್ತು ಜೇನ್ ಪಾಲ್ ಸಾರ್ತ್ರ್ –(ಫೋಟೊಗಳ ಕೃಪೆ: ವಿಕಿಪಿಡಿಯಾ)